**(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 03/08/2024 )**

**ಪಾಟೀ ಸವಾಲು : ವಾದಿ ಪರ ಶ್ರೀ ಜೆ ಡಿ ಬಿ ವಕೀಲರಿಂದ,**

ನಾನು ಪ್ರಸ್ತುತ ಬಾಡಿಗೆಗೆ ಇರುವ ಮಾವಳ್ಳಿ -2 ಗ್ರಾಮ ಪಂಚಾಯತ್ ಕಟ್ಟಡದ ಸಂಖ್ಯೆ 90 ಎ ಆಗಿರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ಉತ್ತರಿಸಿರುತ್ತಾರೆ. ಸದ್ರಿ ಕಟ್ಟಡದ ಸುತ್ತಳತೆ 600 ಸ್ಕ್ವೇರ್ ಫೂಟ್ ಆಗಿರುತ್ತದೆ ಎಂದರೆ ಸರಿ. ಸದ್ರಿ ಸುತ್ತಳತೆಯು ಎರಡು ಅಂಗಡಿ ಸೇರಿ ಆಗಿರುತ್ತದೆ ಎಂದರೆ ಸರಿ. ಅವರೆಡು ಅಂಗಡಿಗಳು ಸೇರಿ ಕಟ್ಟಡ ಸಂಖ್ಯೆ 90 ಎ ಆಗಿರುತ್ತದೆ. ಸದ್ರಿ ಎರಡು ಅಂಗಡಿಗಳಿಗೆ ಪ್ರತ್ಯೇಕ ವಿದ್ಯುತ್ ಮೀಟರ ಇರುತ್ತದೆ ಎಂದರೆ ಸರಿ. ಅದರ ಮೀಟರ್ ಸಂಖ್ಯೆ 11149 ಮತ್ತು 11150 ಆಗಿರುತ್ತದೆ ಎಂದರೆ ಸರಿ.

2. ವಾದ ಪತ್ರದಲ್ಲಿ ಕಾಣಿಸಿರುವ ನನ್ನ ಅಂಗಡಿಯ ಚತುರ್ಗಡಿಗಳು ಸರಿ ಇರುತ್ತದೆ. ನನ್ನ ಎರಡು ಅಂಗಡಿಗಳು, ಕಮಲಾ ಗಜಾನನ ನಾಯ್ಕರವರ ಬಾಡಿಗೆ ಕಟ್ಟಡ ಮತ್ತು ಮೇನಕಾ ಶಿವಕುಮಾರ ಮುರ್ಡೇಶ್ವರ ಇವರ ಬಾಡಿಗೆ ಕಟ್ಟಡ ಒಂದೇ ಕಾಂಪ್ಲೆಕ್ಸನಲ್ಲಿ ಇರುತ್ತವೆ ಎಂದರೆ ಸರಿ. ವಾದ ಪತ್ರದಲ್ಲಿ ವಾದಿಯವರು ಕಾಣಿಸಿರುವ ನನ್ನ ಬಾಡಿಗೆ ಕಟ್ಟಡದ ವಿವರಗಳು ಸರಿಯಾಗಿರುತ್ತದೆ. ಹಾಗೆ ಅದನ್ನು ನಾನು ಒಪ್ಪುತ್ತೇನೆ. ಈ ಮೇಲೆ ಹೇಳಿದಂತೆ ಕಟ್ಟಡದ ವಿವರಗಳು ವಾದ ಪತ್ರದಲ್ಲಿ ಕಾಣಿಸಿರುವುದು ಸರಿಯಾಗಿದೆ ಎಂದು ನನ್ನ ಪ್ರತಿವಾದ ಪತ್ರದಲ್ಲಿ ಹೇಳಿರುತ್ತೇನೆ. ದಾವಾ ಕಟ್ಟಡಕ್ಕೆ ಸಂಬಂಧಿಸಿದಂತೆ ಪಂಚಾಯತಿ ದಾಖಲೆಗಳಲ್ಲಿ ಅದರ ಮಾಲೀಕರು ವಾದಿ ಸಂಸ್ಥೆಯವರು ಎಂದು ಕಂಡುಬರುತ್ತದೆ ಎಂದರೆ ಸರಿ. ಈ ಮೇಲೆ ಹೇಳಿದ ಎರಡು ವಿದ್ಯುತ್ ಮೀಟರ್ ಗಳು ವಾದಿ ಸಂಸ್ಥೆಯ ಹೆಸರಿನಲ್ಲಿರುತ್ತವೆ ಎಂದರೆ ಸರಿ. ವಾದಿಯವರು ದಾವಾ ಕಟ್ಟಡವನ್ನು ಖರೀದಿ ಮಾಡುವ ಪೂರ್ವದಲ್ಲಿ ಅದರ ಮಾಲೀಕರು ಮಹಮ್ಮದ್ ಸಲೀಂ ತಂದೆ ಮಹಮ್ಮದ ಜೆಫ್ರಿ ಆಗಿದ್ದರು ಎಂದರೆ ಸರಿ.

3. ನಾನು ಪ್ರಥಮ ಬಾರಿಗೆ ದಾವಾ ಕಟ್ಟಡವನ್ನು ಅದರ ಮೂಲ ಮಾಲೀಕರಾದ ಮಹಮ್ಮದ್ ಸಲೀಂ ತಂದೆ ಮಹಮ್ಮದ ಜೆಫ್ರಿ ಅವರಿಂದ ಬಾಡಿಗೆಗೆ ಪಡೆದಿರುತ್ತೇನೆ. ನಿಪಿ-3 ಕ್ರಯ ದಸ್ತಾವೇಜಿನ ಪ್ರಕಾರ ವಾದಿ ಸಂಸ್ಥೆಯವರು ದಾವಾ ಕಟ್ಟಡವನ್ನು ಮಹಮ್ಮದ್ ಸಲೀಂ ತಂದೆ ಮಹಮ್ಮದ ಜೆಫ್ರಿ ರವರಿಂದ ಕ್ರಯಕ್ಕೆ ಪಡೆದಿರುತ್ತಾರೆಂದರೆ ಸರಿ. ಸಾಕ್ಷಿಯು ಮುಂದುವರೆದು

ವಾದಿಯು ಖರೀದಿ ಮಾಡಿದ ಜಾಗದಲ್ಲಿ ನನ್ನ ಅಂಗಡಿ ಇರುವ ಕಟ್ಟಡ ಇರುವುದಿಲ್ಲ ಎಂದು ಹೇಳಿರುತ್ತಾರೆ. ನಾನು ನನ್ನ ಪ್ರತಿವಾದ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸುವ ಪೂರ್ವದಲ್ಲಿ ನಿಪಿ-3 ಕ್ರಯ ದಸ್ತಾವೇಜನ್ನು ನೋಡಿರುತ್ತೇನೆ. ನಿಪಿ-3 ಕ್ರಯ ದಸ್ತಾವೇಜನಲ್ಲಿ ದಾವಾ ಕಟ್ಟಡ ಸಂಖ್ಯೆಯನ್ನು ಕಾಣಿಸಿರುತ್ತಾರೆ ಎಂದರೆ ಸರಿ. ನಿ ಪಿ-3 ಕ್ರಯ ದಸ್ತಾವೇಜಿನ ಪ್ರಕಾರ ನನ್ನ ಅಂಗಡಿಯ ಕಟ್ಟಡ ಮತ್ತು ಅದರ ವಿದ್ಯುತ್ ಮೀಟರ ವಾದಿಯ ಹೆಸರಿಗೆ ಬದಲಾಗಿರುತ್ತದೆ ಎಂದರೆ ಸರಿ.

4. ನಾನು ದಾವಾ ಕಟ್ಟಡ ಇರುವ ಸ್ಥಳವನ್ನು ಸರ್ವೆ ಮಾಡಿಸಿರುವುದಿಲ್ಲ. ಯಾವುದೇ ಒಂದು ಕಟ್ಟಡವು ಯಾವ ಸರ್ವೇ ನಂಬರನಲ್ಲಿ ಇದೆ ಎಂದು ತಿಳಿದುಕೊಳ್ಳಬೇಕಾದರೆ ಸರ್ವೆ ಮಾಡಿಸಬೇಕು ಎಂದರೆ ಸರಿ. ನಿಡಿ-3 ನಕ್ಷೆಯು ಯಾವಾಗ ಯಾರು ತಯಾರಿಸಿದರು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಸರ್ವೇ ಮಾಡಿಸದೇ ಇರುವುದರಿಂದ ನನ್ನ ಅಂಗಡಿ ಇರುವ ಕಟ್ಟಡ ಯಾವ ಸರ್ವೆ ನಂಬರನಲ್ಲಿ ಬರುತ್ತದೆ ಎಂದು ನನಗೆ ಹೇಳಲು ಆಗುವುದಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂಬರ 7 ಅ 14 ಬಿನ್ ಶೆತ್ಕಿ ಜಾಗ ಎಂದರೆ ಸರಿ. ಸದ್ರಿ ಸರ್ವೆ ನಂಬರಿಗೆ ಇ ಸ್ವತ್ತು ಆಗಿರುತ್ತದೆ ಎಂದರೆ ಸರಿ. ಅದನ್ನು ನಾನು ನೋಡಿರುತ್ತೇನೆ. ಅದು ನಿಪಿ-4 ಎಂದರೆ ಸರಿ. ಯಾವುದೇ ಒಂದು ಇ ಸ್ವತ್ತು ಮಾಡಬೇಕಾದರೆ ಅದಕ್ಕೆ ಬಡಾವಣೆ ನಕ್ಷೆ ಮಾಡಬೇಕು ಎಂದರೆ ಸರಿ. ಸದ್ರಿ ಬಡಾವಣೆ ನಕ್ಷೆ ಮಾಡಬೇಕಾದರೆ ಜಾಗದ ಅಳತೆ ಮಾಡುತ್ತಾರೆಂದರೆ ಸರಿ. ನಿಪಿ-17 ದಾಖಲೆ ದಾವಾ ಕಟ್ಟಡ ಇರುವ ಸರ್ವೇ ನಂಬರನ ಇರುವ ಬಡಾವಣೆ ನಕ್ಷೆ ಎಂದರೆ ಹೌದು. ಆದರೆ ಅದು ಸುಳ್ಳು ದಾಖಲೆಯಾಗಿರುತ್ತದೆ. ನಿಪಿ-17 ರಲ್ಲಿ ದಾವಾ ಕಟ್ಟಡದ ನಕ್ಷೆ ಕಂಡುಬರುತ್ತದೆ ಎಂದರೆ ಹೌದು. ನಾನು ಹೇಳುವಂತೆ ನಿಪಿ-17 ಸುಳ್ಳು ದಾಖಲೆ ಎಂದು ಹೇಳಿ ಎಲ್ಲೂ ಪ್ರಶ್ನೆ ಮಾಡಿರುವುದಿಲ್ಲ. ಅದೇ ರೀತಿ ದಾವಾ ಸ್ವತ್ತಿನ ಹಿಂದಿನ ಮಾಲೀಕರಾದ ಮಹಮ್ಮದ್ ಸಲೀಂ ತಂದೆ ಮಹಮ್ಮದ ಜೆಫ್ರಿ ರವರು ಬಡಾವಣೆ ನಕ್ಷೆಯನ್ನು ಸುಳ್ಳಾಗಿ ಸೃಷ್ಟಿಸಿದ್ದಾರೆಂದು ಅವರ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ಆ ರೀತಿ ನಿಪಿ-17 ಸುಳ್ಳು ಎಂಬ ವಿಚಾರವನ್ನು ಇದೇ ಪ್ರಥಮ ಬಾರಿಗೆ ಈಗ ಹೇಳುತ್ತಿದ್ದೇನೆ ಎಂದರೆ ಹೌದು. ನಿಪಿ-4 ಮತ್ತು 17 ನ್ನು ದಾವಾ ಕಟ್ಟಡದ ಹಿಂದಿನ ಮಾಲೀಕರಾದ ಮಹಮ್ಮದ್ ಸಲೀಂ ತಂದೆ ಮಹಮ್ಮದ ಜೆಫ್ರಿ ರವರು ಪಂಚಾಯತ್ ನಲ್ಲಿ

ತಯಾರಿಸಿರುತ್ತಾರೆಂದರೆ ಇರಬಹುದು ನನಗೆ ಗೊತ್ತಿಲ್ಲ. ದಾವಾ ಕಟ್ಟಡದ ಇ ಸ್ವತ್ತಿನ ಮಾಲೀಕತ್ವ ವಾದಿಯ ಹೆಸರಿನಲ್ಲಿರುತ್ತದೆ ಎಂದರೆ ಹೌದು. ನಿಪಿ-4 ರಲ್ಲಿ ದಾವಾ ಕಟ್ಟಡದ ಫೋಟೊ ಇರುತ್ತದೆ ಎಂದರೆ ಸರಿ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಸಮಯಾವಕಾಶ ಕೇಳಿದ್ದರಿಂದ ಮುಂದೂಡಲಾಯಿತು .**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ್, ಭಟ್ಕಳ.**